5) ಬಯೋ ಕೆಮಿಸ್ಟ್ರಿ	–	3
ಒಟ್ಟು	–	9

ಇ) ಮಂಗಳೂರು ವಿಶ್ವವಿದ್ಯಾಲಯದಿಂದ ಈ ಕುರಿತಂತೆ ಪ್ರತ್ಯೇಕ ಪ್ರಸ್ತಾವನೆ ಬಂದಿಲ್ಲ.

ಈ) ಸಾಮಾನ್ಯ ನೇಮಕಾತಿಗೆ ಸರ್ಕಾರದ ನಿರ್ಬಂಧವಿರುವುದರಿಂದ ಖಾಲಿ ಇರುವ ಹುದ್ದೆಗಳ ಬದಲಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಬದಲಿ ವ್ಯವಸ್ಥೆಯನ್ನು ಮಂಗಳೂರು ವಿಶ್ವವಿದ್ಯಾಲಯ ಮಾಡಿದೆ.

458(838) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ತಾಂತ್ರಿಕ ಮಹಾವಿದ್ಯಾಲಯಗಳ ತಾಂತ್ರಿಕ ಶಿಕ್ಷಣ ಗುಣಮಟ್ಟ ಸುಧಾರಣೆ ಕಾರ್ಯಕ್ರಮಕ್ಕಾಗಿ (TEQIP) ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ವಿಶ್ವಬ್ಯಾಂಕಿನ ನೆರವು ಬಿಡುಗಡೆಯಾಗಿದೆ;

ಆ) ಈ ಕಾರ್ಯಕ್ರಮದಡಿಯಲ್ಲಿ ಐದು ಕಾಲೇಜುಗಳನ್ನು ಮುಂದುವರೆದ ಕಾಲೇಜುಗಳನ್ನು ಗುರುತಿಸಿದ್ದರೂ ಹಣ ಬಿಡುಗಡೆ ನಿರ್ಧಾರ ತೆಗೆದುಕೊಳ್ಳದಿರಲು ಕಾರಣವೇನು;

ಇ) ಈ ಕಾರ್ಯಕ್ರಮವನ್ನು ಬೇರೆ ರಾಜ್ಯಗಳು ಅನುಷ್ಟಾನಗೊಳಿಸಿದ್ದು ಈ ರಾಜ್ಯದಲ್ಲಿಯೂ ಸಹ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗುವುದೆ;

ಈ) ಕೇರಳ ರಾಜ್ಯದಲ್ಲಿ ಅನುದಾನಿತ ತಾಂತ್ರಿಕ ಕಾಲೇಜುಗಳಿಗೆ ವಿಶ್ವಬ್ಯಾಂಕ್ ನೆರವನ್ನು ಅನುದಾನವೆಂದು ಪರಿಗಣಿಸಿದಂತೆ ಈ ರಾಜ್ಯದಲ್ಲಿಯೂ ಎಕೆ ಪರಿಗಣಿಸಬಾರದು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ವಿಶ್ವಬ್ಯಾಂಕ್ ನೆರವಿನ ತಾಂತ್ರಿಕ ಶಿಕ್ಷಣ ಗುಣಮಟ್ಟ ಸುಧಾರಣೆ (TEQIP) ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು ಕಾಲೇಜುಗಳ ಆಯ್ಕೆಯಾಗಿದೆ. ಆದರೆ ಇದುವರೆವಿಗೆ ಯಾವುದೇ ಹಣಕಾಸಿನ ಸೌಲಭ್ಯ ಬಿಡುಗಡೆಯಾಗಿರುವುದಿಲ್ಲ.

ಆ) ಈ ಕಾರ್ಯಕ್ರಮದಡಿಯಲ್ಲಿ ರಾಜ್ಯದ 4 ಲೀಡ್ ಸಂಸ್ಥೆಗಳಿಗೂ ಮತ್ತು 11 ನೆಟ್ ವರ್ಕ್ ಸಂಸ್ಥೆಗಳನ್ನು ಗುರುತಿಸಿದ್ದರೂ ಕೇಂದ್ರಮಟ್ಟದಲ್ಲಿನ ಮೌಲ್ಯಮಾಪನ ಸಮಿತಿ ಮತ್ತು ಕೇಂದ್ರ ಆಯ್ಕೆ ಸಮಿತಿಯ ಅಂತಿಮ ನಿರ್ಧಾರ ಬಂದಿಲ್ಲದಿರುವ ಕಾರಣ ಇದುವರೆವಿಗೂ ಯಾವುದೇ ಹಣಕಾಸಿನ ಬಿಡುಗಡೆಯಾಗಿರುವುದಿಲ್ಲ.

ಇ) ಕಾಲಮಿತಿಯೊಳಗೆ ಪೂರ್ಣಗೊಳಿಸುವ ಬಗ್ಗೆ ಯೋಜನೆ ಪ್ರಾರಂಭವಾದ ನಂತರ ನಿರ್ಧರಿಸಬೇಕಾಗುವುದು.

ಈ) ವಿಶ್ವಬ್ಯಾಂಕ್ ನೆರವನ್ನು ಅನುದಾನವೆಂದು ಕೇರಳ ರಾಜ್ಯದಲ್ಲಿ ಪರಿಗಣಿಸಿರುವ ಬಗ್ಗೆ ಅಧಿಕೃತವಾದ ಮಾಹಿತಿ ಇರುವುದಿಲ್ಲ.

459(738) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಈಗ ಯಾವ ಸ್ಥಳಗಳಲ್ಲಿ ಮದರ್ ಡೈರಿಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಇವುಗಳ ಸಾಮರ್ಥ್ಯವೆಷ್ಟು;